4. ಅಧ್ಯಕ್ಷರ ಅಪ್ಪಣೆಕೋರಿ ಪ್ರಸ್ತಾಪಿಸಲಾದ ವಿಷಯಗಳು

(ಅ) ಬಳ್ಳಾರಿಯಲ್ಲಿ ಜೂನ್ ತಿಂಗಳಲ್ಲಿ ಬೆಂಕಿ ಆಕಸ್ಮಿಕದಿಂದ 11-12 ಗುಡಿಸಲುಗಳು ಸುಟ್ಟು ಹೋಗಿರುವುದು

ಶ್ರೀ ಎಂ. ದಿವಾಕರ ಬಾಬು (ಬಳ್ಳಾರಿ) : ಮಾನ್ಯ ಅಧ್ಯಕ್ಷರೆ, ಜೂನ್ ತಿಂಗಳಲ್ಲಿ ಬೆಂಕಿ ಆಕಸ್ಮಿಕದಿಂದ 11-12 ಗುಡಿಸಲುಗಳು ಬಳ್ಳಾರಿಯಲ್ಲಿ ಸುಟ್ಟು ಹೋದಮೇಲೆ, ಇಲ್ಲಿಯವರೆಗೂ ಅಲ್ಲಿ ಅವರಿಗೆ ರೀಹ್ಯಾಬಿಲಿಟೇಷನ್ ಮಾಡಿಲ್ಲ. ಅಲ್ಲೇ ಪುನರ್ವಸತಿ ಮಾಡಿಕೊಳ್ಳುತ್ತೇವೆ ಅಂದರೂ ಅದಕ್ಕೂ ಪರ್ಮಿಷನ್ ಕೊಡುತ್ತಾ ಇಲ್ಲ. ಮೊನ್ನೆ ಮುಖ್ಯಮಂತ್ರಿಗಳು ಬಂದಾಗ ಜನತಾ ದರ್ಶನದಲ್ಲಿ ರೆಪ್ರಸೆಂಟೇಷನ್ ಮಾಡಿದಾಗ, ರೀ-ಹ್ಯಾಬಿಲಿಟೇಷನ್ ಮಾಡಬೇಕು ಎಂದು ಹೇಳಿದಾಗ ಅಧಿಕಾರಿಗಳು ಇಲ್ಲ ಎಂದು ಮತ್ತೆ ಬರೆದಿದ್ದಾರೆ. ಈಗ ಅಲ್ಲಿಂದ 3 ತಿಂಗಳಿನಿಂದ ಬಿಸಿಲಿನಲ್ಲಿ, ಮಳೆಯಲ್ಲಿ ಅಲ್ಲೇ ಇದ್ದಾರೆ. ಅವರಿಗೆ ವಸತಿಯನ್ನು ಅಲ್ಲೇ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನಾನು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಾಗ, ನಾವು ರೀ-ಹ್ಯಾಬಿಲಿಟೇಷನ್ ಫಾರ್ಮೇಷನ್ ಮಾಡುತ್ತಿದ್ದೇವೆ, ಫಲಾನುಭವಿಗಳ ಪಟ್ಟಿಯನ್ನು ಮಾಡುತ್ತಿದ್ದೇವೆ ಎಂದು ಹೇಳಿದರು. ಆಮೇಲೆ ಪುರಸಭೆಯ ಕಮೀಷನರ್ ಜೊತೆ ಡಿಸ್ಕಸ್ ಮಾಡಿ ಎಂದು ಹೇಳಿದರು. ಮುನಿಸಿಪಲ್ ಕಮೀಷನರಿಗೆ ಲೆಟರ್ ಬರೆದಾಗ, ಅವರು ನಮಗೆ ಸಂಬಂಧ ಇಲ್ಲ, ನಮ್ಮ ಜಮೀನು ಅಲ್ಲ ಅದು ಅಂತ ಹೇಳಿ ಅವರೊಂದು ಲೆಟರ್ ಬರೆದಿದ್ದಾರೆ. ಪುನಃ ಮತ್ತೆ ನಾನು ಜಿಲ್ಲಾಧಿಕಾರಿಗಳಿಗೆ ಸಂಪರ್ಕಿಸಿದರೆ, ಅವರು ನಾವು ಇದನ್ನು ಮಾಡುವುದಕ್ಕೆ ಬರುವುದಿಲ್ಲ, ಇದು, ಅರ್ಬನ್ ಡೆವಲಪ್ಮೆಂಟ್ ಅಥಾರಿಟಿಯವರು ಮತ್ತೆ ಲೇ-ಔಟನ್ನು ಮಾಡಿದಾಗ, ಅದರಲ್ಲಿ ವಸತಿ ಮಾಡಿಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಆಶ್ರಯ ಕಮಿಟಿಯಲ್ಲಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಒಬ್ಬೊಬ್ಬರು ಒಂದೊಂದು ಸ್ಟೇಟ್ಮೆಂಟ್ ಕೊಡುತ್ತಿದ್ದಾರೆ. ಇದರ ಬಗ್ಗೆ ನನಗೆ ಅರ್ಥವಾಗುವುದಿಲ್ಲ. ಏಕೆಂದರೆ ಆ ಬಡ ಜನರನ್ನು ಅಲ್ಲೇ ಹಾಗೇ ಬಿಸಿಲಿನಲ್ಲಿ, ಮಳೆಯಲ್ಲಿ ಕೊಲ್ಲಬೇಕು ಎಂದು ಇದ್ದೀರೋ ಆ ಅಧಿಕಾರಿಗಳು ಅವರ ಮನಸ್ಸಿಗೆ ಬಂದ ಹಾಗೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ನಾನು ಮಾಡಿಸುತ್ತೇನೆ. ಹೆಚ್ಚಿಗೆ ವಿವರ ಬೇಕಾಗಿಲ್ಲ, ಪ್ರಸ್ತಾಪ ಮಾಡುವುದಷ್ಟೆ. ವೈಜನಾಥ್ ಪಾಟೀಲ್ರವರೆ, ಬಳ್ಳಾರಿಯಲ್ಲಿ ಬೆಂಕಿ ಆಕಸ್ಮಿಕ ನಡೆದಿತ್ತು. ಅದರೊಳಗೆ ಕೆಲವರು ನಿರಾಶ್ರಿತರಾಗಿದ್ದಾರೆ. ಅವರಿಗೆ ಇನ್ನೂ ವಸತಿ ಕಲ್ಪಿಸಿಕೊಟ್ಟಿಲ್ಲ. ಯಾರೂ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುತ್ತಿದ್ದಾರೆ. ದಯಮಾಡಿ ಆ ಕಡೆ ಗಮನ ಹರಿಸಿ ತಕ್ಷಣ ವ್ಯವಸ್ಥೆ ಏನು ಬೇಕೋ ಅದನ್ನು ಮಾಡಿಕೊಡಿ.

(ಆ) ಪಿ.ಯು.ಸಿ. ಪರೀಕ್ಷೆಯಲ್ಲಿ ನಕಲಿ ಅಂಕಪಟ್ಟಿ ಸೃಷ್ಟಿ

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಸನ್ಮಾನ್ಯ ಅಧ್ಯಕ್ಷರೆ, ಪಿ.ಯು.ಸಿ. ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರತಕ್ಕ ಕೆಲವು ವಿದ್ಯಾರ್ಥಿಗಳು, ಅವರನ್ನು ಉತ್ತೀರ್ಣಗೊಳಿಸಿ, ಪಿ.ಯು.ಸಿ. ಮಂಡಲಿಯಲ್ಲಿ ನಕಲಿ ಅಂಕ ಪಟ್ಟಿಯನ್ನು ಸೃಷ್ಟಿಸ ಆ ಮೂಲಕ ಕೆಲವು ವಿದ್ಯಾರ್ಥಿಗಳು ಮಣಿಪಾಲದಲ್ಲಿ ಇಂಜಿನೀಯರಿಂಗ್ ಕಾಲೇಜು ಹಾಗೂ ವೈದ್ಯಕೀಯ ಕಾಲೇಜಿನಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇದರ ಬಗ್ಗೆ 1993ರಲ್ಲಿ ಮಣಿಪಾಲ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಈ ಬಗ್ಗೆ ದೂರು ಕೂಡ ಕೊಟ್ಟಿದ್ದರು. ದೂರು ಕೊಟ್ಟಮೇಲೆ, ಪಿ.ಯು.ಸಿ. ಮಂಡಲಿಯ ಹಿರಿಯ ಅಧಿಕಾರಿಗಳು ಅದರ ಬಗ್ಗೆ ತನಿಖೆ ಮಾಡಿ, ನಕಲಿ ಅಂಕ ಪಟ್ಟಿಯನ್ನು ಸ್ವಾಧೀನಪಡಿಸಿಕೊಂಡು ತನ್ಮೂಲಕ ಅದರ ಬಗ್ಗೆ ತನಿಖೆ ವರದಿ ಸಲ್ಲಿಸಿ 2 ವರ್ಷ ಆದರೂ ಕೂಡ ಈ ಬಗ್ಗೆ ಸಂಬಂಧಪಟ್ಟ ಯಾವುದೇ ಅಧಿಕಾರಿಗಳ ಮೇಲೆ ಕ್ರಮವನ್ನೂ ಕೈಗೊಳ್ಳಲಿಲ್ಲ. ಅನುತ್ತೀರ್ಣರಾದಂತಹ ಯಾವ ವಿದ್ಯಾರ್ಥಿಗಳು ಇದ್ದಾರೆ, ಆ ವಿದ್ಯಾರ್ಥಿಗಳು ಈಗಾಗಲೇ

2ನೇ ವರ್ಷ-3ನೇ ವರ್ಷದ ಇಂಜಿನೀಯರಿಂಗ್ ಹಗೂ ವೈದ್ಯಕೀಯ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈ ರೀತಿ ಬೋಗಸ್ ಅಂಕ ಪಟ್ಟಿಯ ಪ್ರಮಾಣ ಜಾಸ್ತಿಯಾಗುತ್ತಿದೆ: ಮಾತ್ರವಲ್ಲದೆ ಸರ್ಕಾರ ತನಿಖಾ ವರದಿಯನ್ನು ತೆಗೆದುಕೊಂಡ ನಂತರವೂ ಸಹ ಈ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ ಅಂತ ಹೇಳಿದರೆ ಇನ್ನು ಮುಂದೆ ಪಿ.ಯು.ಸಿ.ಯಲ್ಲಿ ವಿದ್ಯಾರ್ಥಿಗಳು ಯಾವ ರೀತಿಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದಂತಹ ವಿದ್ಯಾರ್ಥಿಗಳಿಗೆ ಆದಂತಹ ಅನಾನುಕೂಲಕ್ಕೆ ಯಾರು ಹೊಣೆಗಾರರು ಆಗುತ್ತಾರೆ? ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಡಿ. ಮಂಜುನಾಥ್: (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ಇದು ನನ್ನ ಇಲಾಖೆಗೆ ಬರುವುದಿಲ್ಲ. ನನ್ನ ಸಹೋದ್ಯೋಗಿ ಶ್ರೀ ಗೋವಿಂದೆಗೌಡರ ಪರವಾಗಿ ಇಷ್ಟು ಆಶ್ವಾಸನೆ ಕೊಡುತ್ತೇನೆ. 2 ವರ್ಷ ಆದರೂ ವಿಚಾರಣೆಯಾಗಿಲ್ಲ ಅಂತ ಹೇಳುತ್ತಿದ್ದಾರೆ, ಶ್ರೀಗೋವಿಂದೆಗೌಡರಿಗೆ ಹೇಳಿ ವಿಚಾರಣ ವರದಿ ಬಂದಿದ್ದಾರೆ, ಅವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ.

(ಇ) ಬೆಂಗಳೂರು ಬಂದ್‌ಗೆ ಕರೆ ಕೊಟ್ಟಿರುವುದು

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : (ಬಾಗೇಪಲ್ಲಿ) ಸನ್ಮಾನ್ಯ ಸಭಾದ್ಯಕ್ಷರೆ, ಈ ದಿವಸ ಕೆಲವು ಸಂಘಟನೆಗಳವರು ಬೆಂಗಳೂರು ಬಂದ್‌ಗೆ ಕರೆಯನ್ನು ಕೊಟ್ಟಿದ್ದಾರೆ. ತಮಿಳುನಾಡಿಗೆ 5 ಟಿ.ಎಂ.ಸಿ ಕಾವೇರಿ ನೀರನ್ನು ಸರ್ಕಾರ ಬಿಟ್ಟದ್ದರ ವಿರುದ್ಧ ಪ್ರತಿಭಟನೆ ಮಾಡಲು ಬೆಂಗಳೂರು ಬಂದ್ಗೆ ಕೆರೆಯನ್ನು ಕೊಟ್ಟಿದೆ. ನಮಗೆ ಬೆಂಗಳೂರು ಬಂದ್ ಎಂದು ಹೇಳಿದರೆ, ಹಿಂದೆ ಇದೇ ಕಾವೇರಿ ನದಿಯ ನೀರಿನ ವಿಷಯವಾಗಿ ಬೆಂಗಳೂರಿಗೆ ಬಂದ್ ಕೊಟ್ಟಂತಹ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ನಡೆದಂತಹ ಅಹಿತಕರ ಘಟನೆಗಳು ಮತ್ತು ಅದರಿಂದ ಆದಂತಹ ದುಷ್ಪರಿಣಾಮಗಳು, ಭಾಷೆ ಅಲ್ಪಸಂಖ್ಯಾತರ ಮೇಲೆ ನಡೆದಂತಹ ದಬ್ಬಾಳಿಗಳು ನಮ್ಮ ಮುಂದೆ ಸಾಕ್ಷಿಯಾಗಿ ನಿಂತಿದೆ. ಇವತ್ತು ಕೂಡ ಇದೇ ವಿಷಯದ ಬಗ್ಗೆ ಬಂದ್‌ನ್ನು ಕರೆದಿರತಕ್ಕಂತಹ ಸಂದರ್ಭದಲ್ಲಿ ಬೆಂಗಳೂರು ನಗರದಲ್ಲಿ ಬಂದ್‌ನ ಪರಿಸ್ಥಿತಿ ಏನಾಗಿದೆ? ಅಥವಾ ಬಂದ್ ಎಂದು ಹೇಳಿದರೆ ಕೆಲವರು ಟಾರ್ಗೆಟ್ ಮಾಡಿಕೊಂಡಿರುತ್ತಾರೆ, ಬಂದ್ ಸಂದರ್ಭದಲ್ಲಿ ಅವರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ. ಆದ್ದರಿಂದ ಆ ಭಾಷಾ ಅಲ್ಪಸಂಖ್ಯಾತರಿಗೆ ರಕ್ಷಣೆಯನ್ನು ಕೊಡಲಿಕ್ಕೆ ಮತ್ತು ಬಂದ್ ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಏನೇನು ಕ್ರಮ ತೆಗೆದುಕೊಂಡಿದ್ದಾರೆಂದು ದಯಮಾಡಿ ಸದನಕ್ಕೆ ವಿವರವಾಗಿ ತಿಳಿಸಬೇಕೆಂದು ತಮ್ಮ ಮೂಲಕ ಗೃಹ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಗೌರವಾನ್ವಿತ ಸದಸ್ಯರಾಗಿರತಕ್ಕಂತಹ ಮಾನ್ಯ ಶ್ರೀ ಶ್ರೀರಾಮರೆಡ್ಡಿಯವರು ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಬೆಂಗಳೂರು ಬಂದ್ಗೆ ಕೆಲವರು ಕೊಟ್ಟಿರತಕ್ಕಂತಹ ಕರೆಗೆ ಇದುವರೆಗೂ ಸಹಿತ ಯಾವುದೇ ಸಹಕಾರ ಸಿಕ್ಕಿಲ್ಲ, ಸಾರ್ವಜನಿಕ ಜೀವನ ಯಾವುದೇ ರೀತಿಯ ಅಡಚಣೆ ಇಲ್ಲದೆ ನಡೆಯುತ್ತಿದೆ. ಬಿ.ಟಿ.ಎಸ್. ಬಸ್ಸಗಳು ಓಡಾಡುತ್ತಿವೆ. ಕಛೇರಿಗಳಲ್ಲಿ ಕೆಲಸ ಕಾರ್ಯಗಳು ನಡೆಯುತ್ತಿವೆ. ಬಸ್ಸಗಿಗೆ ಯಾವುದೋ ಒಂದು ಕಡೆ ಮಾತ್ರ ಬೆಳಗಿನ ಜಾವ ಐದೂವರೆ ಗಂಟೆಯಲ್ಲಿ ಯಾರೋ ನಾಲ್ಕು ಐದು ಜನ ಹುಡುಗರು ಕಲ್ಲನ್ನು ಹೊಡೆದರಂತೆ. ಇದನ್ನು ಬಿಟ್ಟರೆ...

ಅಧ್ಯಕ್ಷರು : ಕಳೆದ ಸಾರಿ ನಡೆದಿದ್ದರಿಂದ ಈ ಸಾರಿ ವಿಶೇಷವಾಗಿ ಏನು ಎಚ್ಚರಿಕೆಯನ್ನು ತೆಗೆದುಕೊಂಡಿದ್ದೀರಿ ಅದನ್ನು ಮಾತ್ರ ಹೇಳಿಬಿಡಿ. ವಿವರವಾಗಿ ಏನು ಬೇಡ.